ಅಧ್ಯಕ್ಷರು.—ನಿಯಮ ೩೫ಳಿರ ಕೆಳಗೆ ಎತ್ತಿದ ಪ್ರಶ್ನೆಗೆ ತಕ್ಷಣ ಉತ್ತರಿಸುವುದಕ್ಕೆ ಆಗ ವುದಿಲ್ಲ. ಸಂಬಂಧಪಟ್ಟವರ ಗಮನಕ್ಕೆ ತಂದರೆ ಪರಿಶೀಲನೆ ಮಾಡುತ್ತೇವೆ ಅನ್ನುತ್ತಾರೆ.

ಶ್ರೀ ಪಂಪಾಪತಿ.—ಸಂಬಂಧಪಟ್ಟವರು ಗಮನಹರಿಸಬೇಕೆಂಬುದು ಪ್ರಶ್ನೆ ಕೇಳಿದವರ ಉದ್ದೇಶ. ಆದರೆ ಸಂಬಂಧಪಟ್ಟವರು ಯಾರು ಇದರ ಬಗ್ಗೆ ಗಮನಹರಿಸಲಿಲ್ಲ.

ಶ್ರೀ ಬಿ ಎಸ್, ಯಡಿಯೂರಪ್ಪ.—ಈ ಸರ್ಕಾರಕ್ಕೆ ಆದಾಯ ಬರುವ ಬಾಬಿನ ವಿಚಾರವನ್ನು ಪ್ರಸ್ತಾಪ ಮಾಡುವಾಗ ಮಂತ್ರಿಗಳು ಆರಾಮವಾಗಿ ಕುಳಿತಿರುವುದನ್ನು ನೋಡಿದರೆ ಬಹಳ ಶೋಚನೀಯವಾಗುತ್ತದೆ. ನಾವು ಹೇಳುವುದರಲ್ಲಿ ಏನೂ ರಮಣೀಯತೆ ಇಲ್ಲವೇ ?

ಅಧ್ಯಕ್ಷರು.—ಮತ್ತೇ ನಾನು ಮೂಲಿತತ್ವವನ್ನೇ ಹೇಳಬೇಕಾಗುತ್ತದೆ. ರೂಲ್ ೩೫ಳಿರ ಕೆಳಗೆ ವಿಷಯವನ್ನು ಸದನದ ಗಮನಕ್ಕೆ ತರಬಹುದೇ ಹೊರತು ಸರ್ಕಾರದ ಗಮನಕ್ಕೆ ಕೂಡಾ ತರುವುದಕ್ಕೆ ಆಗುವುದಿಲ್ಲ. ಆದರೂ ಸಹ ನಾನು ವ್ಯಾಪ್ತಿಗೆ ಮೀರಿ ಉತ್ತರ ತರಿಸುತ್ತಿದ್ದೇನೆ. ಪುನಃ ಪುನಃ ಈ ರೀತಿ ಆಪಾದನೆ ಮಾಡುವುದು ಸರಿಯಲ್ಲ.

ಶ್ರೀ ವಿ. ಧನಂಜಯ ಕುಮಾರ್.—ತಮ್ಮ ಕ್ಷೇತ್ರದಲ್ಲೂ ಕೂಡಾ ಈ ರೀತಿಯಾಗುತ್ತಿದೆ. ಇದರ ಬಗ್ಗೆ ತಾವು ಹೆಚ್ಚಿನ ಆಸ್ಥೆ ವಹಿಸಬೇಕಾಗುತ್ತದೆ.

ಅಧ್ಯಕ್ಷರು.—ಇದು ಕ್ಷೇತ್ರದ ಪ್ರಶ್ನೆಯಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ, ವಿಚಾರ ಏನು ಏಂಬ ಬಗ್ಗೆ ಪರಿಶೀಲಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂಬ ಮಾತನ್ನು ಹೇಳೋಣವೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ಗಮನಹರಿಸಿದ್ದಾರೆ.

ಅಧ್ಯಕ್ಷರು.—ನಾಳೆ ಬರುವುದನ್ನು ಹೇಗೆ ಹೇಳುತ್ತೀರಿ ?

(12) ಕಳ ಸಾಗಣೆಕೆ ಮಾಡುತ್ತಿದ್ದ ಲಾರಿ. ನಂ.ಎಂ ಪೈ ಎಸ್ ೭೬೬೮೫ನ್ನು ಹಿಡಿದು ಕೊಟ್ಟಿದ್ದನ್ನು ಬಿಟ್ಟಿರುವ ಬಗ್ಗೆ.

ಶ್ರೀ ಬಿ. ಸ್ವಾಮಿರಾವ್.—ನಾನು ಹೇಳುವುದಕ್ಕೆ ಅವಕಾಶ ಕೊಟ್ಟರೆ, ನೀವೇ ಆಮೇಲೆ ತೀರ್ಮಾನಕ್ಕೆ ಬರುತ್ತೀರಿ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮರದಟಿಗೆ ಎಂಬ ಗ್ರಾಮದಲ್ಲಿ ನಾಟಾಕಲೆಕ್ಟ್ ಮಾಡತಕ್ಕ ಒಂದು ದೊಡ್ಡ ಡಿಪೋ ಇದೆ. ಬಹುಶಃ ರಾಜ್ಯದಲ್ಲೇ ಇಂಥ ಡಿಪೋ ಯಾವುದೂ ಇಲ್ಲ. ಅಲ್ಲಿ ಅಗ್ನಿಶಾಮಕದಳದ ಸೇವೆ ಕೂಡಾ ಇದೆ. ಕೋಟ್ಯಾಂತರ ರೂಪಾಯಿ ಮಾಡಿ ಕೊಂಡಿರತಕ್ಕ ಕಳ್ಳಸಾಗಣೆದಾರರು ೨೧-೧-೮೪ಳಿರ ರಾತ್ರಿ ಹತ್ತು ಗಂಟೆಗೆ ನ್ಯಾಷನಲ್ ರೋಡ್‌ವೇಸ್ ಎಂದು ಹೆಸರು ಇಟ್ಟುಕೊಂಡಿರತಕ್ಕ ೭೬೬೮೫ನೇ ನಂಬರಿನ ಲಾರಿಯಲ್ಲಿ ನಾಟಾಪನ್ನು ತುಂಬಿಕೊಂಡು ಹೋಗುತ್ತಿರುವಾಗ ಊರಿನವರು ಆ ಲಾರಿಯನ್ನು ಸಂಬಂಧಪಟ್ಟ ರೇಂಜ್ ಆಫೀಸರ್‌ರವರಿಗೆ ಹಿಡಿದು ಕೊಟ್ಟಿದ್ದಾರೆ. ಆದರೆ ಅವರು ಯಾರನ್ನೂ ಅರೆಸ್ಟ್ ಮಾಡಿಲ್ಲ, ಲಾರಿಯನ್ನು ಬಿಟ್ಟಿದ್ದಾರೆ. ಇದಕ್ಕೆ ದೊಡ್ಡ ರಾಜಕೀಯ ಕೈವಾಡ ಇದೆಯೆಂದು ಗೊತ್ತಾಗಿದೆ. ಈ ಹಿನ್ನೆಲೆಯಲ್ಲಿ ಬಹಳಷ್ಟು ಬೆಲೆ ಬಾಳುವ ನಾಟಾ ಹೋಗಿದೆ. ಇದನ್ನು ಸಿಓಡಿ ತನಿಖೆಗೆ ಒಳಪಡಿಸಿದರೆ ರಾಜ್ಯದ ಅರಣ್ಯ ಸಂಪತ್ತನ್ನು ಉಳಿಸುವುದಕ್ಕೆ ಸಹಾಯವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ಎ. ಜೀವಿಜಯ.—(ಮಾನ್ಯ ಅರಣ್ಯ ಖಾತೆಯ ಸಚಿವರು) ಈಗ ತಾನೇ ನೋಟೀಸ್ ಬಂದಿದೆ. ನಾನಂ ಉತ್ತರ ತರಿಸಿ ಹೇಳಿಕೆ ಕೊಡುತ್ತೇನೆ.

(13) ಆಹಾರ ಮತ್ತು ನಾಗರೀಕ ಸರಬರಾಜು ಕಾರ್ಪೊರೇಷನ್ ಗುಲ್ಬರ್ಗಾ ದವರು ತೊಗರಿ ಬೇಳೆಯನ್ನು ಖರೀದಿ ಮಾಡುವುದರಲ್ಲಿ ಭ್ರಷ್ಟಾಚಾರವಾಗಿರುವ ಬಗ್ಗೆ.

ಶ್ರೀ ಎಸ್. ಕೆ. ಕಾಂತ.—ಆಹಾರ ಮತ್ತು ನಾಗರೀಕ ಸರಬರಾಜು ಕಾರ್ಪೊರೇಷನ್ ಗುಲ್ಬರ್ಗ ಮಾರುಕಟ್ಟೆಯಲ್ಲಿ ಐದು ಸಾವಿರ ಚೀಲ ತೊಗರಿ ಬೇಳೆಯನ್ನು ಹೋದ ತಿಂಗಳು ಖರೀದಿ ಮಾಡಿದ್ದಾರೆ. ಅಷ್ಟು ದೊಡ್ಡ ಪ್ರಮಾಣದಲ್ಲಿ ಖರೀದಿ ಮಾಡುವಾಗ ಯಾವುದೇ ಟೆಂಡರ್ ಕರೆಯದೇ ಖರೀದಿ ಮಾಡಿದ್ದಾರೆ